ಶ್ರೀ ಎಸ್. ಎಂ. ಯಾಹ್ಯಾ.—ಕೋಲಾರ ಜಿಲ್ಲೆಗೆ ಯಾವ ನೆರವು ಕೊಡಬೇಕೋ ಅದನ್ನು ಬೇರೆ ಜಿಲ್ಲೆಗಳಿಗಿಂತಾ ಹೆಚ್ಚು ಪ್ರಮಾಣದಲ್ಲೇ ಕೊಡಲಾಗಿದೆ. ನಮ್ಮ ಅಂಕಿಅಂಶ ನೋಡುವುದಾದರೆ, ಇದುವರೆಗೆ ಕೋಲಾರದಲ್ಲಿ ೫೨,೬೦೦ ಪಂಪುಸೆಟ್ಟುಗಳಿಗೆ ವಿದ್ಯುತ್ ಒದಗಿಸಲಾಗಿದೆ. ಅಲ್ಲಿಗೆ ೨೨೦ ಕೆ.ವಿ. ಲೈನ್ ಹಾಕಿದ್ದೇವೆ. ಅಲ್ಲಿ ಸಬ್‌ಸ್ಟೇಷನ್ಸ್ ಕೂಡ ಮಾಡಿದ್ದೇವೆ. ಈ ವರ್ಷ ಇನ್ನೂ ಹೆಚ್ಚು ಮಾಡುವುದಕ್ಕೆ ದೊಡ್ಡ ಪ್ರೋಗ್ರಾಮ್ ಹಾಕಿದ್ದೇವೆ ಇವತ್ತು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ವಿದ್ಯುತ್ ಕ್ಷಾಮ ಬಹಳ ಇದೆ. ಇದಕ್ಕೆ ಕಾರಣ ಹಲವಾರು ವರ್ಷಗಳಿಂದ ನಾವು ಬೇಡಿಕೆಗೆ ತಕ್ಕ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡದೇ ಇರುವುದು. ಇವತ್ತು ಡಿಮಾಂಡ್ ಹಾಗೂ ಸಪ್ಲೈನಲ್ಲಿ ಹೊಂದಾಣಿಕೆ ಇಲ್ಲ. ನಮ್ಮ ಕೋಲಾರ ಬೆಂಗಳೂರಿಗೆ ಸಮೀಪದಲ್ಲಿಯೇ ಇದೆ. ನಾವು ಕೊಡದಿದ್ದರೆ ನೀವು ನಮ್ಮನ್ನು ಬಿಡುವುದಿಲ್ಲ. ನಿಮಗೆ ಎಷ್ಟು ಪಾಲು ಕೊಡಬೇಕೋ ಅಷ್ಟು ಪಾಲು ಕೊಟ್ಟಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ.—ಕೋಲಾರ ಜಿಲ್ಲೆಯಲ್ಲಿ ಕಾವೇರಿ ನದಿ ಇಲ್ಲ, ತುಂಗಭದ್ರಾ ನದಿ ಇಲ್ಲ. ನಾವು ಪಂಪ್‌ಸೆಟ್ ಹಾಗೂ ಕೆರೆಗಳನ್ನು ಮಾತ್ರ ಅವಲಂಬಿಸಬೇಕಾಗಿದೆ. ಕೆರೆಗಳಲ್ಲಿಂತೂ ಹೂಳು ತೆಗೆಸಿಲ್ಲ, ದುರಸ್ತಿ ಮಾಡುವುದಿಲ್ಲ. ಬೋರ್‌ವೆಲ್ ಹಾಕುವುದಿಲ್ಲ. ಈ ಕಡೆ ಪವರ್ ಇಲ್ಲದಿದ್ದರೆ ಏನಾಗುತ್ತದೆ ?

ಶ್ರೀ ಎಸ್. ಎಂ. ಯಾಹ್ಯಾ.—ನಿಮ್ಮ ಜಿಲ್ಲೆಗೆ ನಾವು ವಿದ್ಯುತ್ ಚೆನ್ನಾಗೇ ಕೊಟ್ಟಿದ್ದೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಕೋಲಾರ ಜಿಲ್ಲೆಯ ವಿದ್ಯುತ್ ಪರಿಹಾರಕ್ಕೆ ಜನರೇಟರ್ ಸ್ಥಾಪನೆಗೆ ಒಪ್ಪಿಗೆ ನೀಡಿದ್ದೀರಿ. ಇವತ್ತು ಅಲ್ಲಿಯಷ್ಟೇ ವಿದ್ಯುತ್ ಅಭಾವ ನಮ್ಮ ಮಂಡ್ಯಾ ಜಿಲ್ಲೆಯಲ್ಲೂ ಇದೆ, ಮಂಡ್ಯದಲ್ಲೂ ಜನರೇಟರ್ ಸ್ಥಾಪನೆ ಮಾಡುವ ಉದ್ದೇಶ ನಮ್ಮ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಎಂ. ಯಾಹ್ಯಾ.—ಇದು ಕೋಲಾರಕ್ಕೆ ಸಂಬಂಧಪಟ್ಟ ವಿಚಾರ. ನಿಮ್ಮ ಜಿಲ್ಲೆಯಲ್ಲಿ ನಾವು ವಿದ್ಯುತ್ ಉತ್ಪಾದನೆ ಮಾಡುತ್ತಿದ್ದೇವೆ.

೯.೫೦ ಎ.ಎಂ.

ಶ್ರೀ ಎಂ. ವಿ. ವೆಂಕಟಪ್ಪ.—ಕೋಲಾರದಿಂದ ಮುಳಬಾಗಿಲಿಗೆ ೬೫ ಕೆ. ವಿ. ಟವರ್ ಲೈನ್ ಹಾಕಿದ್ದು ಪೋಲ್ಸ್ ಹಾಕಿ ರೆಡಿಯಾಗಿದೆ. ಆ ಲೈನಿಗೆ ವೈರ್ ಇಲ್ಲವೆಂದು ಪೆಂಡಿಂಗ್‌ನಲ್ಲಿದೆ. ನಾಳೆ ಮುಳಬಾಗಿಲಿನಲ್ಲಿ ಹೆಚ್ಚು ಕಡಿಮೆ ಪವರ್ ಸರಿ ಹೋಗುತ್ತದೆ. ಆದ್ದರಿಂದ ಡಿಸೆಂಬರ್ ಕೊನೆಯವರೆಗಾದರೂ ಪೂರ್ತಿ ಮಾಡುವುದಕ್ಕೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಎಸ್. ಎಂ. ಯಾಹ್ಯಾ.—ಸ್ವಲ್ಪ ಹಣದ ಅಭಾವ ಸಹ ಇದೆ. ಆದರೂ ಮಾನ್ಯ ಸದಸ್ಯರು ಹೇಳಿದ ಪ್ರಕಾರ ನಮ್ಮ ಅಧಿಕಾರಿಗಳಿಗೆ ತಿಳಿಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್ ಯಡಿಯೂರಪ್ಪನವರು ಗೈರು ಹಾಜರಾಗಿದ್ದಾರೆ.)

ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ

೪೬೬. ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಗಾಗಿ ಸರ್ಕಾರವು ಪ್ರಯತ್ನಪಡುತ್ತಿದೆಯೇ ?

ಆ) ಹಾಗಿದ್ದಲ್ಲಿ ಈ ಕಾರ್ಖಾನೆ ಸ್ಥಾಪನೆಗೆ ಸರ್ಕಾರವು ನಡೆಸಿರುವ ಪ್ರಯತ್ನಗಳೇನು ?

ಇ) ವಿಜಯನಗರ ಉಕ್ಕು ಕಾರ್ಖಾನೆಗೆ ಶಂಕು ಸ್ಥಾಪನೆಯಾಗಿ ಎಷ್ಟು ವರ್ಷಗಳಾಗಿವೆ,

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕಾ ಇಂಧನ ಮತ್ತು ವಕ್ಫ್ ಮಂತ್ರಿಗಳು).—

ಅ) ಪ್ರಯತ್ನ ಪಡುತ್ತಿದೆ.

ಇ) ವಿಜಯನಗರ ಉಕ್ಕು ಕಾರ್ಖಾನೆಯ ಸಲುವಾಗಿ ೮,೭೬೬ ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ೧೦ ಕೋಟಿ ರೂಪಾಯಿಗಳ ಪರಿಹಾರ ಕೊಡಲು ನಿರ್ಧರಿಸಿ ಈಗಾಗಲೇ ೫ ಕೋಟಿ ರೂಪಾಯಿಗಳನ್ನು ವಿತರಣೆ ಮಾಡಲಾಗಿದೆ.

೨) ಕೇಂದ್ರ ಸರ್ಕಾರದವರು ಈ ಬಗ್ಗೆ ಪ್ರಾಜೆಕ್ಟ್ ಇಂಜಿನಿಯರ್ ಕಛೇರಿಯನ್ನು ಪ್ರಾರಂಭಿಸಿರುತ್ತಾರೆ.

೩) ರಾಜ್ಯ ಸರ್ಕಾರವು ೮ ನೇ ಯೋಜನೆಯಲ್ಲಿ ಸದರಿ ಪ್ರಾಜೆಕ್ಟನ್ನು ಸೇರಿಸುವಂತೆ ಕೇಂದ್ರ ಸರ್ಕಾರ ಮತ್ತು ಯೋಜನಾ ಆಯೋಗವನ್ನು ಒತ್ತಾಯಿಸುತ್ತಿದೆ,

೪) ಕೇಂದ್ರ ಸರ್ಕಾರದವರು ೧೯೯೧ ನೇ ಜನವರಿ ತಿಂಗಳಲ್ಲಿ ಸದರಿ ವಿಷಯದ ಬಗ್ಗೆ ಅಂತಿಮ ತೀರ್ಮಾನವನ್ನು ಜಾಗ್ರತೆ ತೆಗೆದುಕೊಳ್ಳುವುದಾಗಿ ರಾಜ್ಯ ಸರ್ಕಾರಕ್ಕೆ ತಿಳಿಸಿರುತ್ತಾರೆ.

೫) ೧೯ ವರ್ಷಗಳು.

ಶ್ರೀ ವಾಟಾಳ್ ನಾಗರಾಜ್.—ಈ ರಾಜ್ಯದ ಹಿತದೃಷ್ಟಿಯಿಂದ ಇದು ಬಹಳ ಪ್ರಮುಖವಾದ ಪ್ರಶ್ನೆ ಈ ವಿಜಯನಗರದ ಉಕ್ಕು ಕಾರ್ಖಾನೆ ಶಂಕುಸ್ಥಾಪನೆಯಾಗಿ ೧೯ ವರ್ಷಗಳು ಕಳೆದವು ಆದರೆ ಈಗ ಅಲ್ಲಿ ಪ್ರಾಜೆಕ್ಟ್ ಇಂಜಿನಿಯರ್ ಕಛೇರಿಯನ್ನು ಬಿಟ್ಟರೆ ಇನ್ನು ಏನೇನು ಅಭಿವೃದ್ಧಿಯಾಗಿದೆ ? ಈ ಯೋಜನೆಗೆ ಇಷ್ಟೊಂದು ವಿಳಂಬವಾಗುವುದಕ್ಕೆ ಕಾರಣವೇನು ಆವತ್ತು ಈ ಯೋಜನೆಗೆ ವೆಚ್ಚ ಎಷ್ಟು ಎಂಬುದಾಗಿ ತೀರ್ಮಾನವಾಗಿತ್ತು ? ಇವತ್ತು ಅದರ ವೆಚ್ಚ ಎಷ್ಟು ಜಾಸ್ತಿಯಾಗಿದೆ? ಇಷ್ಟೊಂದು ವಿಳಂಬವಾಗುವುದಕ್ಕೆ ಕಾರಣವೇನಾ ?

ಶ್ರೀ ಎಸ್. ಎಂ. ಯಾಹ್ಯಾ.—ಇದುವರೆಗೆ ಈ ಯೋಜನೆಗೆ ಯೋಜನಾ ಆಯೋಗದವರು ಒಪ್ಪಿಗೆ ಕೊಡದಿದ್ದ ಕಾರಣ ಇದು ನಡೆಯುತ್ತಿದೆ. ಇದು ಬಹಳ ದೊಡ್ಡ ಯೋಜನೆ. ೧೯೭೧ ರ್ಲ್ಲ ಇದರ ಶಂಕುಸ್ಥಾಪನೆಯನ್ನು ಆಗಿನ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಜಿಯವರಲ್ಲಿ ಮಾಡಿದ್ದರು. ಕರ್ನಾಟಕದಲ್ಲಿ ಈ ಒಂದು ದೊಡ್ಡ ಯೋಜನೆ ಬರಬೇಕು ಎಂದು ನಮಗೂ ಕೂಡ ಬಹಳ ಆಸಕ್ತಿ ಇದೆ. ಅವಕ್ಕಾಗಿ ಪುನಃ ನಾವು ಅವರಿಗೆ ತಿಳಿಸಿದ್ದೇವೆ, ೮ ನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಅವನ್ನು ಸೇರಿಸಿಕೊಳ್ಳಬೇಕೆಂದು ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಮಾಡುತ್ತಿದೆ.

ಶ್ರೀ ವಾಟಾಳ್ ನಾಗರಾಜ್.—ಯೋಜನಾ ಆಯೋಗ ಅನುಮತಿಯನ್ನು ಕೊಡದೆ, ಆವತ್ತು ಬರೀ ಇದರ ಶಂಕುಸ್ಥಾಪನೆಯನ್ನು ಮಾಡುವಂತಹ ಪರಿಸ್ಥಿತಿ ಏಕೆ ಉದ್ಭವವಾಯಿತು ? ಯೋಜನಾ ಆಯೋಗದ ಅನುಮತಿಯನ್ನು ತೆಗೆದುಕೊಂಡು ಶಂಕು ಸ್ಥಾಪನೆ ಆಗಬೇಕೂ ಶಂಕುಸ್ಥಾಪನೆ ಮಾಡಿದವರು ಈ ದೇಶದಲ್ಲಿ ಪ್ರಧಾನ ಮಂತ್ರಿಗಳಾಗಿದ್ದವರು. ಯಾವ ಒಂದು ವ್ಯವಹಾರವಿಲ್ಲದೆ ಸುಮ್ಮನೆ ಯಾರ ಕಣ್ಣು ಒರೆಸುವುದಕ್ಕೋ ಶಂಕು ಸ್ಥಾಪನೆ ಮಾಡಿದ್ದಾಯಿತು ಇದರ ಜೊತೆಗೆ ೧೯ ವರ್ಷವಾದರೂ ಯೋಜನಾ ಆಯೋಗ ಇದುವರೆವಿಗೂ ತನ್ನ ಒಪ್ಪಿಗೆಯನ್ನು ಕೊಡದೆ ಇರುವುದಕ್ಕೆ ಅದರ ಹಿಂದೆ ಇರತಕ್ಕ ವಿಚಾರ ಏನು ? ಆವತ್ತಿನ ಪರಿಸ್ಥಿತಿಯಲ್ಲಿ ಈ ಯೋಜನೆಗೆ ಮಾಡಿದ ಅಂದಾಜು ಎಷ್ಟು ? ಈಗ ಅದರ ವೆಚ್ಚ ಎಷ್ಟು ಹೆಚ್ಚಾಗಿದೆ ? ಎಂಬುದನ್ನು ಹೇಳಬೇಕು. ಮತ್ತೆ ಪರಿಹಾರ ಮ್ಯಾರ್ಯಾರು ಜಮೀನುಗಳನ್ನು ವಶಪಡಿಸಿಕೊಂಡಿದ್ದಿರೋ ಅವರಿಗೆ ಇವತ್ತಿನವರೆಗೆ ಹತ್ತು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗಿದ್ದು. ಕೇವಲ ೫ ಕೋಟಿ ರೂಪಾಯಿಗಳ ಪರಿಹಾರವನ್ನು ಮಾತ್ರ ಕೊಡಲಾಗಿದೆ. ೧೯ ವರ್ಷಗಳಾದರೂ ಇನ್ನೂ ೫ ಕೋಟಿ ರೂಪಾಯಿಗಳ ಪರಿಹಾರ ಕೊಟ್ಟಿಲ್ಲ. ಪರಿಹಾರವನ್ನು ಯಾವಾಗ ಕೊಡುತ್ತೀರಿ ? ಯೋಜನಾ ಆಯೋಗದಲ್ಲಿ ೧೯ ವರ್ಷಗಳು ನಿಧಾನವಾಗುವುದಕ್ಕೆ ಕಾರಣ ಏನು ? ಈಗ ಇದರ ವೆಚ್ಚ ಎಷ್ಟಾಗುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ —ಯೋಜನಾ ಆಯೋಗದ ಒಪ್ಪಿಗೆ ದೊರಕುವುದು ಏಕೆ ತಡವಾಗಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಾವು ಕೊಟ್ಟಂತಹ ಸ್ಕೀಮು ೪೦೦೦ ಕೋಟಿ ರೂಪಾಯಿಗಳದ್ದು. ಅವರು ಈ ೪,೮೦೦ ಕೋಟಿ ರೂಪಾಯಿಗಳನ್ನು ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ಮಧ್ಯದಲ್ಲಿ ಬೇರೆ ಬೇರೆ ಪ್ರೊಸಸ್‌ನಲ್ಲಿತ್ತು. ಅದಕ್ಕಾಗಿ ತಡವಾಯಿತು. ಮತ್ತೆ ಕೆಲವರು ವಿಚಾರದಲ್ಲಿ ರಿಸರ್ವ್ ಆಗಬೇಕೆಂದು ಹೇಳಿದರು. ಇದುವರೆಗೆ ಆದೆಲ್ಲಾ ಆಗಿದೆ. ಈಗಲಾದರೂ ಇದಕ್ಕೆ ಅನುಮತಿಯನ್ನು ಕೊಡಬೇಕೆಂದು ಪುನಃ ಯೋಜನಾ ಆಯೋಗಕ್ಕೆ ರಾಜ್ಯ ಸರ್ಕಾರದಿಂದ ಒತ್ತಡವನ್ನು ತರುತ್ತೇವೆಂದು ಮಾತ್ರ ಹೇಳಬಲ್ಲೆ.

ಶ್ರೀ ವಾಟಾಳ್ ನಾಗರಾಜ್.—ಯೋಜನಾ ಆಯೋಗದ ಸಭೆಗಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಸಲ ಹೋಗಿಬಂದಿದ್ದಾರೆ. ೧೯ ವರ್ಷಗಳಿಂದ ಇದೇ ನಡೆಯುತ್ತಿದೆ. ಕೇಂದ್ರ ಸರ್ಕಾರ ಇದು ಆಗುವುದಿಲ್ಲ ಎಂದಾದರೂ ಹೇಳಲಿ, ಇಲ್ಲ, ಮಾಡುತ್ತೇವೆಂದು ಹೇಳಲಿ. ಅದನ್ನು ಬಿಟ್ಟು ಈ ರೀತಿ ನೆನೆಗುದಿಯಲ್ಲಿ ಬಿಟ್ಟಿರುವುದು ಸರಿಯಾದುದಲ್ಲ. ಇದರ ಬಗ್ಗೆ ತಾವು ತೀಪ್ಪವಾಗಿ ಮಾಡಿರತಕ್ಕ ಪ್ರಯತ್ನ ಏನು ? ಇದರ ಜೊತೆಯಲ್ಲಿ ಪ್ರಾರಂಭವಾದ ಅನೇಕ ಕಾರ್ಖಾನೆಗಳು ಈಗಾಗಲೆ ಪ್ರೊಡಕ್ಷನ್

ಪ್ರಾರಂಭ ಮಾಡಿವೆ, ಕೆಲಸ ಪ್ರಾರಂಭವಾಗಿವೆ. ಅವುಗಳಿಂದ ತಯಾರಾದ ವಸ್ತುಗಳು ಹೊರಗಡೆ ಬರುತ್ತಿವೆ. ನಮ್ಮ ಸರ್ಕಾರ ಇದನ್ನು ಇದೇ ರೀತಿ ತಳ್ಳುತ್ತಿದೆಯೋ ಅಥವಾ ಇದಕ್ಕೆ ಒಂದು ಕಾಲ ಮಿತಿಯನ್ನು ಹಾಕಿಕೊಳ್ಳುತ್ತದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಕಳೆದ 4–5 ತಿಂಗಳ ಅವಧಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳ 2 3 ಸಾರಿ ದೆಹಲಿಗೆ ಹೋದಾಗ ಇದರ ವಿಚಾರದಲ್ಲಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದ್ದಾರೆ. ಬೇಕಾದಷ್ಟು ಪತ್ರ ವ್ಯವಹಾರ ಸಹ ಮಾಡುತ್ತಿದ್ದೇವೆ. ಇದಕ್ಕಾಗಿ ನಮ್ಮ ಕಡೆಯಿಂದ ಎಷ್ಟು ಸಾಧ್ಯವೋ ಅಷ್ಟೆಲ್ಲಾ ಪ್ರಯತ್ನಗಳನ್ನು ಯೋಜನಾ ಆಯೋಗದ ಒಪ್ಪಿಗೆಗಾಗಿ ಮತ್ತು ಕೇಂದ್ರ ಸರ್ಕಾರದ ಒಪ್ಪಿಗೆಪಡೆಯುವ ಸಲುವಾಗಿ ನಾವು ಮಾಡುತ್ತಿದ್ದೇವೆ. ನಾನೂ ಸಹ ಪುನಃ ದೆಹಲಿಗೆ ಹೋಗಿ ನನ್ನಿಂದ ಏನು ಮಾಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಮಾಡುವುದಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ.—ಮಾನ್ಯ ಸಚಿವರು ಉತ್ತರ ಕೊಟ್ಟ ಹಾಗೆ 8,786 ಎಕರೆ ಜಮೀನು ವಶಪಡಿಸಿಕೊಂಡಿದ್ದಾರೆ, ಇದಕ್ಕಾಗಿ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಅಲ್ಲಿ ಕೇಂದ್ರ ಸರ್ಕಾರದವರು ಪ್ರಾಜೆಕ್ಟ್ ಇಂಜಿನಿಯರ್ ಆಫೀಸನ್ನು ಸ್ಟಾರ್ಟ್ ಮಾಡುತ್ತಿದ್ದಾರೆ ಇದನ್ನೆಲ್ಲಾ ಯೋಜನಾ ಆಯೋಗದ ಒಪ್ಪಿಗೆ ಇಲ್ಲದೆ ಮಾಡಬಹುದೆ ಎಂದು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ.—ಯೋಜನಾ ಆಯೋಗದವರು ಕೆಲವೊಮ್ಮೆ ಇವೆಲ್ಲಾ ಸ್ಪೇಡ್ ವರ್ಕ್ ನೀವು ಮುಂದೆ ಹೋಗಿ ಪರವಾಗಿಲ್ಲ ಅಂತ ಹೇಳುತ್ತಾರೆ ಲ್ಯಾಂಡ್ ಅಕ್ವಿಸಿಷನ್ ಇದೆಲ್ಲ ಇನಿಷಿಯಲ್ ಸ್ಟೇಜ್‌ನಲ್ಲಿ ಮಾಡಬಹುದಾದ್ದು ಇದಕ್ಕೆ ಬಹಳಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದ್ದರಿಂದ ಸ್ಪೇಡ್ ವರ್ಕ್ ಮಾತ್ರ ಮಾಡುತ್ತಿದ್ದೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ರಾಜ್ಯ ಸರ್ಕಾರ ಈ ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದ್ದಾರೆ ಮೊನ್ನೆ ದಿವಸ ೧೦ನೇ ತಾರೀಖಿಂದ ಮಾನ್ಯ ಮುಖ್ಯಮಂತ್ರಿಗಳು ಪ್ಲಾನಿಂಗ್ ಕಮೀಷನ್ ಮೀಟಿಂಗ್‌ಗೆ ದೆಹಲಿಗೆ ಹೋಗಿದ್ದರು. ಆ ಕಾಲಕ್ಕೆ ಈ ಯೋಜನೆಯನ್ನು ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಬೇಕೆಂದು ಆಗ್ರಹಪಡಿಸಿದ್ದಾರಾ ? ಅದರಂತೆ ಇದನ್ನು ಏನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆಯೇ ? ಎರಡನೆಯದಾಗಿ, ಯಾವುದೇ ಯೋಜನೆಗೆ ಅಡಿಗಲ್ಲು ಇಡುವ ಕಾಲಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು.....

ಅಧ್ಯಕ್ಷರು.—ಆ ಪ್ರಶ್ನೆಯನ್ನು ಕೇಳಿದ್ದಾರೆ.

SRI SHIVANANDA H. KOUJALAGI.—Whether it has been included in the 8th Five Year Plan?

MR. SPEAKER.—How can he say that ?

SRI S. M. YAHYA.—The meeting was held only a few days back. How can I say whether it is included or not.

ಶ್ರೀ ಎಲ್. ಆರ್. ಶಿವರಾಮೇಗೌಡ.—ಯೋಜನಾ ಆಯೋಗದ ಒಪ್ಪಿಗೆ ದೊರೆತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ನಮ್ಮ ರಾಜ್ಯದ ಮುಖಂಡರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ಇದ್ದಾರೆ. ನಮ್ಮ ರಾಜ್ಯಕ್ಕೆ ಬಹಳ ಬೇಕಾಗಿರತಕ್ಕ ಈ ಕೈಗಾರಿಕೆ ಬಗ್ಗೆ ತಾವು ಮತ್ತು ಈ ಮುಖಂಡರೆಲ್ಲ ಸೇರಿ ಕೇಂದ್ರ ಸರ್ಕಾರದ ಮೇಲೆ ಏಕೆ ಒತ್ತಡ ತರಬಾರದು.

ಶ್ರೀ ಎಸ್. ಎಂ. ಯಾಹ್ಯಾ.—ಒತ್ತಡ ತಂದಿದ್ದೇವೆಂದು ಹೇಳಿದಾಗ ಶ್ರೀಮಾನ್ ಪಾಟೀಲ್ ನಾಗರಾಜ್‌ರವರು ಎಂತಹ ಒತ್ತಡ ಅಂತ ಕೇಳಿಬಿಟ್ಟರು. ನಾವು ಒತ್ತಡ ತರುತ್ತಿದ್ದೇವೆ. ಅವರಿಗೂ ಇದು ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೂ ಚೆನ್ನಾಗಿ ಈ ವಿಚಾರ ಗೊತ್ತಿದೆ. ಅವರ ಮನಸ್ಸಿನಲ್ಲೂ ಇದು ಆಗಬೇಕು ಅಂತ ಇದೆ. ಬೇಕಾದಷ್ಟು ಕಾರಣಗಳು ಇರಬಹುದು. ಇದು ಆಗ ಬೇಕೆಂದು ಅವರ ಮನಸ್ಸಿನಲ್ಲೂ ಇದೆ. ನಮ್ಮೆಲ್ಲರ ಮನಸ್ಸಿನಲ್ಲೂ ಇದೆ. ನಾನು, ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೋಗಿ ಪುನಃ ಅವರೊಟ್ಟಿಗೆ ಚರ್ಚೆ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಈ ದೇಶದಲ್ಲಿ ಆರ್ಥಿಕ ಅಭಿವೃದ್ಧಿಯನ್ನು ರಾಜಕೀಯ ಗತ್ತುಗಾರಿಕೆಯಿಂದ ಮಾಡುವುದನ್ನು ದಯಮಾಡಿ ನಿಲ್ಲಿಸಬೇಕು. ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಬಹುದು ರಾಜ್ಯದಲ್ಲಿ ಯಾವುದೇ ಸರ್ಕಾರ ಇರಬಹುದು. ೧೯ ವರ್ಷಗಳ ಹಿಂದೆಯೇ ಈ ದೇಶದ

ಪ್ರಧಾನಿ ಅಡಿಗಲ್ಲು ಹಾಕಿರತಕ್ಕ ಒಂದು ಯೋಜನೆಯ ಬಗ್ಗೆ ನಾವು ತೀವ್ರವಾಗಿ ಗಮನಹರಿಸಬೇಕು. ಈ ಕೆಲಸ ಹಿಂದೆಯೇ ಆಗಬೇಕಾಗಿತ್ತು. ಆಗ ಈಗಿನ ನಮ್ಮ ಮುಖ್ಯಮಂತ್ರಿಗಳು ಕೇಂದ್ರದಲ್ಲಿ ಮಂತ್ರಿಗಳಾಗಿದ್ದರು. ಆ ಕಾಲಕ್ಕೆ ಅದು ಆಗಬೇಕಾಗಿತ್ತು. ಈಗಲಾದರೂ ಸಹ ಆ ರಾಜಕೀಯ ವಿಚಾರಗಳನ್ನು ಬಿಟ್ಟು ಈ ಯೋಜನೆಗೆ ಪಂಜೂರಾತಿಯನ್ನು ಪಡೆಯುವುದರ ಸಲುವಾಗಿ ನಮ್ಮವರೇ ಆದ ಯೋಜನಾ ಆಯೋಗದ ಉಪಾಧ್ಯಕ್ಷರು ಸಂಪೂರ್ಣ ಬೆಂಬಲವನ್ನು ಕೊಟ್ಟು ಈ ರೀತಿ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಯೇ ತೀರಬೇಕೆಂಬ ಒಂದು ಕಾರ್ಯಕ್ರಮವನ್ನು ಈ ಸರ್ಕಾರ ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಯಾಹ್ಯಾ.—ಇದರಲ್ಲಿ ರಾಜಕೀಯ ಇಲ್ಲ. ಆದರಲ್ಲೂ ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ರಾಜಕೀಯ ಮಾಡುವುದಕ್ಕೆ ತಯಾರಿಲ್ಲ. ಇದರಲ್ಲಿ ಯಾವುದೇ ರೀತಿಯ ರಾಜಕೀಯ ಇಲ್ಲ.

ಅಧ್ಯಕ್ಷರು.—ಶ್ರೀ ಶಂಬುನಾಥ್.—ನೀವು ಪ್ರಶ್ನೆಯನ್ನು ಕೇಳಿ

ಶ್ರೀ ಇ. ಟಿ. ಶಂಭುನಾಥ್.—ನಾನು ಯಾವ ಪ್ರಶ್ನೆಯನ್ನು ಕೇಳಲಿ.....

(ನಗು)

ಅಧ್ಯಕ್ಷರು.—ನೀವು ಬಳ್ಳಾರಿ ಜಿಲ್ಲೆಯವರಲ್ಲವೇ; ಅದಕ್ಕಾಗಿ ಈ ಪ್ರಶ್ನೆಗೆ ಉಪ ಪ್ರಶ್ನೆಯನ್ನು ಕೇಳಿ ಅಂತ ಹೇಳಿದೆ.

ಶ್ರೀ ಇ. ಟಿ. ಶಂಭುನಾಥ್.—ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಬಳ್ಳಾರಿ ಸ್ಪೀಲ್ ಪ್ಲಾಂಟಾದರೂ ಅದುಕೂಡ ಇಡೀ ಕರ್ನಾಟಕಕ್ಕೆ ಸಂಬಂಧಪಟ್ಟದ್ದಾಗಿದೆ. ಅವರು ಕೇಳುತ್ತಿದ್ದರು. ಅದಕ್ಕಾಗಿ ನಾನು ಸುಮ್ಮನಾಗಿ ಬಿಟ್ಟೆ.

ಹರಿಜನರ ಮೇಲೆ ನಡೆದ ಹಲ್ಲೆ ಹಾಗೂ ದೌರ್ಜನ್ಯಗಳ ಬಗ್ಗೆ.

೮೮೮. ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ರಾಜ್ಯದಲ್ಲಿ ಕಳೆದ ಆರು ತಿಂಗಳಿಂದ ಹರಿಜನರ ಮೇಲೆ ನಡೆದ ಹಲ್ಲೆ

ಆ) ಹಲ್ಲೆ ನಡೆಸಿದವರ ಮೇಲೆ ಕೈಗೊಂಡ ಕಾನೂನು ಕ್ರಮಗಳೇನು ? ಹಾಗೂ ತಪ್ಪಿತಸ್ಥರಲ್ಲಿ ಎಷ್ಟು ಮಂದಿಗೆ ಶಿಕ್ಷೆಯಾಗಿರುತ್ತದೆ ?

ಇ) ನೊಂದ ಕುಟುಂಬಗಳಿಗೆ ಸರ್ಕಾರ ಯಾವ ರೀತಿ ನೆರವು ಹಾಗೂ ಸಹಾಯ ನೀಡಿದೆ ?

ಈ) ಹರಿಜನರ ಮೇಲಿನ ಹಲ್ಲೆ ದೌರ್ಜನ್ಯವನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

ಉ) ಕೇಂದ್ರ ಸರ್ಕಾರದಿಂದ ಪರಿಹಾರ ಹಣ ಬಂದಿದೆಯೇ ? ಹಾಗಿದ್ದಲ್ಲಿ ಎಷ್ಟು ಹಣ ಬಂದಿರುತ್ತದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಸಮಾಜ ಕಲ್ಯಾಣ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳ ಪರವಾಗಿ).—

ಅ) ೩೮೫.

ಆ) ಹಲ್ಲೆ ನಡೆಸಿದವರ ಮೇಲೆ ಮೊಕದ್ದಮೆ ನೋಂದಾಯಿಸಿ ಹಾಗೂ ಅವರನ್ನು ಬಂದಿಸಿ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಗುತ್ತಿದೆ. ತಪ್ಪಿತಸ್ಥರ ಮೇಲೆ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು ವಿಚಾರಣಾ ಹಂತದಲ್ಲಿರುತ್ತವೆ.

ಇ) ನೊಂದ ಕುಟುಂಬಗಳಿಗೆ, ಆದೇಶ ಸಂಖ್ಯೆ/ಎಸ್‌ಡಬ್ಲ್ಯೂಎಲ್ ೧ ಎಸ್‌ಎಸ್‌ಸಿ ೮೬ ದಿನಾಂಕ ೨೧-೪ ೮೬ರ ಪ್ರಕಾರ ಪರಿಹಾರ ನೀಡಲಾಗಿದೆ. ಜಿಲ್ಲಾ ಪರಿಷತ್ ವತಿಯಿಂದ ದೌರ್ಜನ್ಯದಲ್ಲಿ ನೊಂದ ಕುಟುಂಬಗಳಿಗೆ ಪುನರ್‌ವಸತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಇಂತಹ ಸಹಾಯ ಧನ ಯೋಜನೆಯಡಿಯಲ್ಲಿ ಬ್ಯಾಂಕ್‌ಗಳಿಂದ ಸಾಲಗಳನ್ನು ಕೊಡಿಸಲಾಗುತ್ತಿದೆ.